**ಸಾಕ್ಷಿಯನ್ನು ದಿಃ 19.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಂ.ಬಿ ವಕೀಲರಿಂದಃ-**

ನಾನು ಯಾವುದೆ ವಿಧ್ಯಾಭ್ಯಾಸ ಮಾಡಿಲ್ಲ. ನಮ್ಮ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಎಂದು ನುಡಿದು, ನಂತರ ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರಿಕೆಯಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಎಂದು ಬರೆಸಿದ್ದು ಅದರಲ್ಲಿ ವಾದಿಗಳು ಯಾರು ಪ್ರತಿವಾದಿಗಳು ಯಾರು ಎಂದು ನನಗೆ ಗೊತ್ತಿಲ್ಲ. ಎಷ್ಟು ಜನ ಎಷ್ಟು ಜನರ ಮೇಲೆ ಕೇಸ್ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕೇಸ್ ಹಾಕಿರುವವರು ಸೋಮಶೇಖರ, ಉದಯಕುಮಾರ್, ವೆಂಕಟಲಕ್ಷ್ಮಮ್ಮ, ತುಳಸಮ್ಮ ಮತ್ತು ಸಾವಿತ್ರಮ್ಮ ಎಂಬುವವರು. ಸೋಮಶೇಖರ, ಉದಯಕುಮಾರ್ ರವರನ್ನು ಹೊರತು ಪಡಿಸಿ ಉಳಿದವರು ಬದುಕಿದ್ದಾರೊ ಇಲ್ಲವೊ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ.

ಸೋಮಶೇಖರ, ಉದಯಕುಮಾರ್ ರವರ ತಾತನ ಹೆಸರು ಕರೀಗೌಡ. ಅವರ ತಾತ ಯಾವಾಗ ತೀರಿ ಕೂಂಡರು ಎಂದರೆ ಗೊತ್ತಿಲ್ಲ. ಕರೀಗೌಡ ಹೆಂಡತಿ ಹೆಸರು ಮರಮ್ಮ. ಕರೀಗೌಡ ರವರ ಹೆಂಡತಿಯ ನಿಖರವಾದ ಹೆಸರು ನನಗೆ ಗೊತ್ತಿಲ್ಲ. ಕರೀಗೌಡರ ಹೆಂಡತಿ ಹೆಸರು ಬೋರಮ್ಮ ಎಂದರೆ ಸರಿ. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಕರೀಗೌಡರಿಗೆ 3 ಜನ ಹೆಣ್ಣು ಮಕ್ಕಳು, ಒಬ್ಬ ಮಗ, ಅವರುಗಳೆಂದರೆ ತಿಮ್ಮೇಗೌಡರು ಪುಟ್ಟಲಕ್ಷ್ಮಮ್ಮ ತುಳಸಮ್ಮ ಮತ್ತು ಸಾವಿತ್ರಮ್ಮ ಆಗಿರುತ್ತಾರೆ. ಕರೀಗೌಡರ 4 ಮಕ್ಕಳು ಮರಣ ಹೊಂದಿರುತ್ತಾರೆ. ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತುಳಸಮ್ಮನ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸಾವಿತ್ರಮ್ಮನ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರ ಮಕ್ಕಳುಗಳ ಹೆಸರು ಮಹೇಶ್ ಮತ್ತು ಶಿವು. ಅವರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಯಾವ ಕಾರಣಕ್ಕಾಗಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಸ್ವತ್ತುಗಳ ಮೇಲೆ, ಎಷ್ಟು ಸರ್ವೆ ನಂ. ಗಳ ಮೇಲೆ ಈ ದಾವೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ನಮ್ಮ ಪಕ್ಕದ ಜಮೀನು 11 ಗುಂಟೆ ಮೇಲೆ ಹಾಕಿರುವ ವಿಚಾರ ಮಾತ್ರ ಗೊತ್ತು ಎನ್ನುತ್ತಾರೆ. ಹಾಗೆ ಕೇಸ್ ಹಾಕಿದ ಸ್ವತ್ತುಗಳ ವಿಸ್ತೀರ್ಣವನ್ನು ನಾನು ತಿಳಿದುಕೊಂಡಿಲ್ಲ. ಮನೆಗಳು, ಬ್ಯಾರನ್, ನಿವೇಶನಗಳು ಎಷ್ಟಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಷಡ್ಯೂಲ್ ಆಸ್ತಿಗಳ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಸ್ವತ್ತುಗಳ ಆರ್.ಟಿ.ಸಿ ಗಳು, ಎಂ.ಆರ್, ಕ್ರಯ ಪತ್ರ ಮತ್ತು ದಾನ ಪತ್ರಗಳು ಯಾರ ಹೆಸರಿನಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಯಾರ್ಯಾರಿಗೆ ಹೇಗೆ ಬಂದಿವೆ ಎಂದು ನಾನು ತಿಳಿದುಕೊಂಡಿಲ್ಲ. ಕೇಸು ಹಾಕಿದ ಸರ್ವೆ ನಂ. 72/3 ರ ಜಮೀನು ಬಗ್ಗೆ ಮಾತ್ರ ನನಗೆ ಗೊತ್ತು ಉಳಿದ ಜಮೀನುಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. 72 ರಲ್ಲಿ ಎಷ್ಟು ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 72/2 ರಿಂದ 72/8 ರ , 72/9 ಇತ್ತೀಚಿಗೆ ಪೋಡಾಗಿ 72/12 ಮತ್ತು 13 ರಂತೆ ಆಗಿದ್ದು, 72/10 ಪೋಡಾಗಿ 72/10 ಮತ್ತು 15 ಎಂದು ಆಗಿದ್ದು, ಅವುಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ಸರ್ವೆ ನಂ. 72/3 11 ಗುಂಟೆ ಜಮೀನಿನ ಆರ್.ಟಿ.ಸಿ ಎಂ.ಆರ್ ಯಾರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿಲ್ಲ ಸರ್ವೆ ನಂ. 72/3 ರ ಯಾವ ದಿಕ್ಕಿಗೆ ನನ್ನ ಜಮೀನು ಬರುತ್ತದೆ ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ನಮ್ಮ ಜಮೀನಿನ ಸರ್ವೆ ನಂ. 41/2 ಇದ್ದು, ಅದರ ಯಾವ ದಿಕ್ಕಿಗೆ ಸರ್ವೆ ನಂ. 72/3 ರ ಜಮೀನು ಬರುತ್ತದೆ ಎಂದರೆ ನನಗೆ ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಾಗುವುದಿಲ್ಲ ಎನ್ನುತ್ತಾರೆ. ಪ್ರಮಾಣ ಪತ್ರದಲ್ಲಿ ನನ್ನ ಜಮೀನು ಯಾರ ದಿಕ್ಕಿಗೆ ಸದರಿ ಸರ್ವೆ ನಂ. 72/3 ರ ಜಮೀನು ಬರುತ್ತದೆ ಎಂದು ಹೇಳಿ ಬರೆಸಿಲ್ಲ. ನ್ಯಾಯಾಲಯದ ಮುಂದೆ ಈ ದಿನ ಹಾಜರಿರುವ ಸೋಮಶೇಖರ ಎಂಬುವವರು ಸಾಕ್ಷಿ ಹೇಳಲು ನನ್ನನ್ನು ಕರೆದುಕೊಂಡು ಬಂದಿರುವುದು ಎಂದರೆ ಸರಿ. ನಾನು ಮತ್ತು ಅವರು ಊರಿನಲ್ಲಿ ಬಹಳ ಚೆನ್ನಾಗಿದ್ದೇವೆ ಎಂದರೆ ಎಲ್ಲರೂ ಚೆನ್ನಾಗಿದ್ದೇವೆ ಎನ್ನುತ್ತಾರೆ.

ಸರ್ವೆ ನಂ. 72/3 ರ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ಯಾವುದೆ ವಿಚಾರ ನನಗೆ ಗೊತ್ತಿಲ್ಲದಿದ್ದರೂ ಸೋಮಶೇಖರ ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ4 ರಿಂದ 8 ನೇ ಪ್ರತಿವಾದಿಗಳ ಪರ ಶ್ರೀ ಎಂ.ಪಿ. ವಕೀಲರಿಂದಃ</u>**

ಪ್ರತಿವಾದಿಗಳು ಮತ್ತು ಅವರ ವಕೀಲರು ಗೈರು ಹಾಜರಿದ್ದು, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.